1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 127/2022

ದಿನಾಂಕ ಃ 24.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 28 ಪಿ. ಡಬ್ಲ್ಯೂ:23

| | |
|---|---|
| ಸಾಕ್ಷಿದಾರರ ಹೆಸರು | ಸುರೇಶ್ ಬಾಬು ಕೆ |
| ತಂದೆಯ ಹೆಸರು | ಲೇಟ್ ಕೆ ಎಲ್ ಕೃಷ್ಣಸ್ವಾಮಿ ರಾವ್ |
| ವಯಸ್ಸು | 62 ವರ್ಷ |
| ಉದ್ಯೋಗ | ನಿವೃತ್ತ ಸರ್ಕಾರಿ ಉದ್ಯೋಗಿ |
| ವಾಸ | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಮೂಲತಃ ಕಿರುಗಾವಲು ಊರಿನವನಾಗಿರುತ್ತೇನೆ. ನಾನು ಕಿರುಗಾವಲಿನಲ್ಲಿ ನಾಲ್ಕು ಅಂಗಡಿಗಳು ಹಾಗೂ ಮನೆಯನ್ನು ಹೊಂದಿರುತ್ತೇನೆ.
2. ಫ್ರಾಸಾ.11 ರವರು ನನ್ನ ತಂದೆ ಹಾಗೂ ಅಣ್ಣನ ಕಾಲದಿಂದಲೂ ನಮಗೆ ಸೇರಿದ ಒಂದು ಅಂಗಡಿಯಲ್ಲಿ ಭಾರತ್ ಮೆಡಿಕಲ್ ಸ್ಟೋರ್ ಎಂಬ ಹೆಸರಿನಲ್ಲಿ ಮೆಡಿಕಲ್ ಸ್ಟೋರನ್ನು ಹೊಂದಿದ್ದಾರೆ. ಸದರಿ ಆಸ್ತಿಯು, ನನ್ನ ಹಾಗೂ ನನ್ನ ತಮ್ಮನ ಹೆಸರಿನಲ್ಲಿ ಈಗ ಇರುತ್ತದೆ. ನಮ್ಮ ತಂದೆಯ ಕಾಲದಿಂದಲೂ ಮೌಖಿಕ ಒಪ್ಪಂದದ ಮೇರೆಗೆ ಸದರಿ ಅಂಗಡಿಯನ್ನು ಫ್ರಾಸಾ.11 ರವರಿಗೆ ಬಾಡಿಗೆಗೆ ನೀಡಿರುತ್ತೇವೆ. ಕಿರುಗಾವಲು ಡಿಸಿಸಿ ಬ್ಯಾಂಕಿನಲ್ಲಿ ಇರುವ ನಮ್ಮ ಬ್ಯಾಂಕಿನ ಖಾತೆಗೆ ಫ್ರಾಸಾ.11ರವರ ಬಾಡಿಗೆ ಹಾಕುತ್ತಾರೆ. ಸದರಿ ಅಂಗಡಿಯ ಬಗ್ಗೆ ಪೊಲೀಸರು 2022 ನೇ ಸಾಲಿನಲ್ಲಿ ಫೋನ್ ಮಾಡಿ, ಫ್ರಾಸಾ. 11 ರವರಿಗೆ ಬಾಡಿಗೆಗೆ ಕೊಟ್ಟಿರುವ ವಿಚಾರದಲ್ಲಿ ಹಾಗೂ ಯಾರೋ ಮೃತರಾಗಿರುವ ವಿಚಾರದಲ್ಲಿ ನನ್ನನ್ನು ವಿಚಾರಿಸಿದ್ದರು.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎನ್ ಕೆ ಎಸ್ ವಕೀಲರಿಂದ ಃ**

3. ಸದರಿ ಫ್ರಾಸಾ.11 ರವರಿಗೆ ಮೆಡಿಕಲ್ ಸ್ಟೋರನ್ನು ನಡೆಸಲು ಇದ್ದ ವಿದ್ಯಾರ್ಹತೆ ಬಗ್ಗೆ ನಾನು ವಿಚಾರಿಸಿಲ್ಲ. ಪೊಲೀಸರು ವಿಚಾರಣೆಯ ಬಗ್ಗೆ ನನಗೆ ಪ್ರತ್ಯೇಕ ನೋಟಿಸನ್ನು ನೀಡಿಲ್ಲ. ಘಟನೆಯ

ಬಗ್ಗೆ ಪೊಲೀಸರು ಹೇಳಿದ್ದು ಬಿಟ್ಟರೇ ನನಗೆ ಏನು ತಿಳಿದಿಲ್ಲ ಎಂದರೆ ಸಾಕ್ಷಿಯು ಪೊಲೀಸರು ಹೇಳಿದ್ದರು, 2 ತಿಂಗಳಿಗೆ ಒಮ್ಮೆ ನಾನು ಊರಿಗೆ ಬರುತ್ತಿದ್ದರಿಂದ ಘಟನೆಯ ಬಗ್ಗೆ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.